# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **110/2017**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ಜಯಮ್ಮ | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ/ಗಂಡನ ಹೆಸರು | ಃ ಶ್ರೀ ನಟರಾಜ್ | **21.10.2021** |
| ವಯಸ್ಸು | ಃ **38** ವರ್ಷ | |
| ವೃತ್ತಿ | ಃ ಲಾಡ್ಜನಲ್ಲಿ ಕೆಲಸ | ಪ್ರಾ.ಸಾ. ಃ **18** |
| ವಾಸಸ್ಥಳ | ಃ ಮಹಾದೇಶ್ವರ ಬೆಟ್ಟ | ಚಾ.ಸಾ. ಃ **31** |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

ನಾನು ಈಗ *5* ವರ್ಷದ ಹಿಂದೆ ಮಹಾದೇಶ್ವರ ಬೆಟ್ಟದ ಭಾರತಿ ಲಾಡ್ಜನಲ್ಲಿ ಗುಡಿಸುವ ಕೆಲಸ ಮಾಡುತ್ತಿದ್ದೆ. ಈಗ ಚುಂಚನಗಿರಿ ಲಾಡ್ಜನಲ್ಲಿ ಕೆಲಸ ಮಾಡುತ್ತಿದ್ದೇನೆ. ಈಗ ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿಗಳ ಪೈಕಿ *5* ಜನರು ಲಾಡ್ಜ ಗೆ ಬಂದ ಬಗ್ಗೆ ಮಾಹಿತಿ ಇಲ್ಲ. ಆರೋಪಿಗಳು ಲಾಡ್ಜ ಗೆ ಬಂದ ಬಗ್ಗೆ ಮತ್ತು ಆರೋಪಿಗಳನ್ನು ಪೋಲಿಸರು ಲಾಡ್ಜಗೆ ಕರೆದುಕೊಂಡು ಬಂದ ಬಗ್ಗೆ ಮಾಹಿತಿ ಇಲ್ಲ. ನಾನು ಪೋಲಿಸರ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಆಗಿ ಹೇಳಿಕೆ ಕೊಟ್ಟಿಲ್ಲ. ನಿಪಿ-*75* ರಲ್ಲಿ ನಿಪಿ-*75(ಎ), (ಬಿ)* ನನ್ನ ಸಹಿ ಇದೆ. ನಿಪಿ-*75* ರ ಅಂಶಗಳ ಬಗ್ಗೆ ಮಾಹಿತಿ ಇಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

ಲಾಡ್ಜನ ಮ್ಯಾನೇಜರ್ ಶ್ರೀ ಜಯರಾಮ ಅವರು ರಜೆ ಹಾಕಿದ ವೇಳೆ ನಾನು ಗ್ರಾಹಕರಿಗೆ ರೂಂ ಗಳನ್ನು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ದಿನಾಂಕ ***23.12.2016*** ರಂಯಿ ರಾತ್ರಿ ಸುಮಾರು ***08.00*** ಗಂಟೆ ವೇಳೆಯಲ್ಲಿ ಇಬ್ಬರು ವ್ಯಕ್ತಿಗಳು ಲಾಡ್ಜ ಗೆ ಬಂದು ***5*** ಜನರಿಗೆ ಉಳಿದುಕೋಳ್ಳಲು

ಒಂದು ರೂಂ ನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಶ್ರೀಮತಿ ಭಾರತಿ ಅವರಿಗೆ ವಿಚಾರವನ್ನು ತಿಳಿಸಿ *1100/-* ರೂ ಗೆ ರೂಂನ ಬಾಡಿಗೆ ಒಪ್ಪಿ ರೂಂ ಸಂಖ್ಯೆ ಸಿ-*3* ಕೀ ಅನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ *27.12.2016* ರಂದು ಮೈಸೂರು ನಗರ ವಿವಿ ಪುರಂ ಪೋಲಿಸರು ಸದರಿ *5* ಜನರನ್ನು ಕರೆದುಕೊಂಡು ಬಂದು ದಿನಾಂಕ *23.12.2016* ರಂದು ರೂಂ ನಲ್ಲಿ ತಿಳಿದುಕೊಂಡಿದ್ದ ಬಗ್ಗೆ ನಾನು ಗುರುತಿಸಿ ನನಗೆ ಈಗ ಓದಿ ಹೇಳಿದಂತೆ ನಿಪಿ-*76* ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರು ಇರುವ *2* ರಿಂದ *5* ನೇ ಆರೋಪಿಗಳನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. *1* ರಿಂದ *5* ನೇ ಆರೋಪಿಗಳಿಗೆ ನಾನು ಲಾಡ್ಜ ನ ರೂಂ ನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-*61* ರಂತೆ ಲಾಡ್ಜ ನ ಪುಸ್ತಕವನ್ನು ಮತ್ತು ಸಿಸಿ ಟಿವಿ ಡಿವಿಆರ್ ನ್ನು ನನ್ನ ಸಮಕ್ಷಮ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಹಿ ಪಡೆದಿದ್ದಾರೆ ಆದರೆ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಟಿ ಪಿ ಡಿ ರವರಿಂದಃ-**

ಆರೋಪಿಗಳಿಂದ ಮುಂಗಡ ಹಣ ಪಡೆದ ಬಗ್ಗೆ ದಾಖಲೆ ಇಲ್ಲ. ನಾನು Receptionist ಆಗಿ ಕೆಲಸ ಮಾಡುತ್ತಿರಲಿಲ್ಲ. ಲಾಡ್ಜ ನಲ್ಲಿ ರಶೀದಿ ಪುಸ್ತಕವನ್ನು ನಿರ್ವಹಿಸಿದ ಬಗ್ಗೆ ಗೊತ್ತಿಲ್ಲ.

***ಮರು ವಿಚಾರಣೆಃ- ಇಲ್ಲ.***

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*